**ದಿನಾಂಕಃ 30/08/2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ 7 (ಎ)ಪ್ರತಿವಾದಿಗಳ ಪರ ಶ್ರೀ ಎಸ್ ಎ ಕೆ ವಕೀಲರಿಂದಃ**

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಧಾರವಾಡದಲ್ಲಿರುವ ಮನೆಯನ್ನು ಪೌತಿ 7 ನೇ ಪ್ರತಿವಾದಿ ಖರೀದಿ ಮಾಡಿದ್ದರಿಂದ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇವೆ. ಪೌತಿ 7 ನೇ ಪ್ರತಿವಾದಿ ಆಸ್ತಿಯನ್ನು ಖರೀದಿ ಮಾಡಿದರ ಬಗ್ಗೆ ದಾವೆ ದಾಖಲಾತಿ ಮಾಡುವ ಮೊದಲು ಯಾವುದೇ ದಾಖಲಾತಿಗಳನ್ನು ನಾನು ಪರೀಶಿಲನೆ ಮಾಡಿಲ್ಲ. ಆಸ್ತಿಯನ್ನು ಪೌತಿ 7 ನೇ ಪ್ರತಿವಾದಿಗೆ ಮಾರಾಟ ಮಾಡಿದ ಹೆಸರಿಗೆ ನನ್ನ ಅಕ್ಕ ಗೌರಮ್ಮ ನನಗೆ ಹೇಳಿರುತ್ತಾಳೆ. ಅನುಕ್ರಮ ನಂ . 6 ನೇ ಆಸ್ತಿ ನಮ್ಮ ಕುಟುಂಬದ ಆಸ್ತಿ ಅಂತಾ ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ತೋರಿಸಿಲ್ಲ.

ಪೌತಿ 7 ನೇ ಪ್ರತಿವಾದಿ ಅನುಕ್ರಮ ಸಂಖ್ಯೆ 6 ನೇಯ ಆಸ್ತಿಯನ್ನು 4 ನೇ ಪ್ರತಿವಾದಿಯಿಂದ ದಿಃ 23-05-2018 ರಂದು ರೂ. 35 ಲಕ್ಷ 25 ಸಾವಿರ ರೂ. ಗಳಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಖರೀದಿ ಮಾಡಿರುತ್ತಾರೆ ಎಂದರೆ ಆ ವಿಷಯ ನನಗೆ ಖರೀದಿ ಆದ ನಂತರ ಗೊತ್ತಾಗಿರುತ್ತದೆ ಅಂತಾ ನುಡಿದಿರುತ್ತಾರೆ. ಖರೀದಿ ಕೊಟ್ಟ ಒಂದೆರಡು ತಿಂಗಳ ನಂತರ ನನಗೆ ಖರೀದಿ ಕೊಟ್ಟಿರುವ ವಿಷಯ ಗೊತ್ತಾಯಿತು. ಅನುಕ್ರಮ ನಂ 6 ನೇ ಆಸ್ತಿಯನ್ನು 4 ನೇ ಪ್ರತಿವಾದಿ ಬ್ಯಾಂಕಿನಲ್ಲಿ ಸಾಲ ಪಡೆದು ಖರೀದಿ ಮಾಡಿದ್ದರು ಎಂದರೆ ಗೊತ್ತಿಲ್ಲ. 7 ನೇ ಪ್ರತಿವಾದಿ ಅನುಕ್ರು ನಂ 6 ರ ಆಸ್ತಿಯನ್ನು ಖರೀದ ಮಾಡಿದಾಗ ಅದು ಖಾಲಿ ನಿವೇಶನ ಇತ್ತು , ಆಮೇಲೆ ಮನೆ ಕಟ್ಟಿರುತ್ತಾರೆ. 7 ನೇ ಪ್ರತಿವಾದಿ ಅನುಕ್ರಮ ನಂ 6 ನೇ ಆಸ್ತಿಯನ್ನು ಖರಿಲದಿ ತೆಗೆದುಕೊಳ್ಳುವುದಕ್ಕಿಂತ ಮೊದಲು ದಿಃ 21/04/2018 ರಂದು ವಿಜಯವಾಣಿ

ಕನ್ನಡ ದಿನಪತ್ರಿಕೆಯಲ್ಲಿ ಸಾರ್ವಜನಿಕ ತಿಳುವಳಿಕೆ ನೋಟಿಸನ್ನು ಕೊಡಿಸಿದ್ದರು ಎಂದರೆ ಗೊತ್ತಿಲ್ಲ. ಈಗ ನಾನು ನೋಡುತ್ತಿರುವ ದಿನಪತ್ರಿಕೆಯಲ್ಲಿ ಸದರಿ ಸಾರ್ವಜನಿಕ ತಿಳುವಳಿಕೆ ನೋಟಿಸಿನ ವಿಷಯ ಇರುತ್ತದೆ ಎಂದರೆ ಸಾಕ್ಷಿ ಸದರಿ ದಿನಪತ್ರಿಕೆಯನ್ನು ಓದಿ ನೋಡಿದ ನಂತರ ಇದೆ ಅಂತಾ ನುಡಿಯುತ್ತಾರೆ. ಸಾಕ್ಷಿ ದಿನಪತ್ರಿಕೆಯನ್ನು ನೋಡಿ ಗುರುತಿಸಿದ್ದರಿಂದ ವಿಜಯವಾಣಿ ದಿನಪತ್ರಿಕೆಯನ್ನು ನಿಡಿ 1 ಎಂದು , ಸಂಬಂಧಪಟ್ಟ ಸಾರ್ವಜನಿಕ ನೋಟಿಸನ್ನು ನಿಪಿ 1 (ಎ) ಎಂದು ಗುರುತಿಸಲಾಯಿತು. ಪೌತಿ 7 ನೇ ಪ್ರತಿವಾದಿ ಅನುಕ್ರಮ ಸಂಖ್ಯೆ 6 ನೇಯ ಆಸ್ತಿಯನ್ನು 4 ನೇ ಪ್ರತಿವಾದಿಯ ಮಾಲ್ಕಿ ವಹಿವಾಟಿಗೆ ಸಂಬಂಧ ಪಟ್ಟಿದ್ದು ಎನ್ನುವುದನ್ನು ಖಚಿತ ಪಡಿಸಿಕೊಂಡು ನಂತರ ನಿ ಡಿ 7 (ಎ)ನೇದ್ದರ ಪ್ರಕಾರ ಸಾರ್ವಜನಿಕ ತಿಳುವಳಿಕೆ ನೋಟಿಸನ್ನು ಹೊರಡಿಸಿದ ನಂತರ ಕಾನೂನುಬದ್ಧ ರೀತಿಯಲ್ಲಿ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಖರೀದಿ ವಿಷಯ ಆಮೇಲೆ ಗೊತ್ತಾಗಿರುತ್ತದೆ ಅಂತಾ ನುಡಿದಿರುತ್ತಾರೆ.

ಅನುಕ್ರಮ ನಂ 6 ನೇ ಆಸ್ತಿ ಮೂಲತಃ ವೆಂಕಟರೆಡ್ಡಿ ಕೋಣರೆಡ್ಡಿ ಅವರದ್ದು ಎಂದರೆ ಸರಿ . ಅನುಕ್ರಮ ನಂ 6 ನೇ ಆಸ್ತಿಯನ್ನು 4 ನೇ ಪ್ರತಿವಾದಿ 8 ಲಕ್ಷ ರೂ. ಗಳಿಗೆ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಎಲ್ಲರೂ ಸೇರಿಯೇ ಖರೀದಿ ಮಾಡಿರುತ್ತಾರೆ ಅಂತಾ ನುಡಿದಿರುತ್ತಾರೆ. 8 ಲಕ್ಷ ರೂಪಾಯಿಯಲ್ಲಿ ನಾನು ನೇರವಾಗಿ ನಗದು ಹಣವನ್ನು 4 ನೇ ಪ್ರತಿವಾದಿಯ ಕೈಯಲ್ಲಿ ಕೊಟ್ಟಿಲ್ಲ ಆದರೆ ಜಮೀನಿನಲ್ಲಿ ನಾನು ಮತ್ತು ಉಳಿದ ಸಹೋದರರು ಸಹ ಕೆಲಸ ಮಾಡಿರುತ್ತೇವೆ ಅದರಿಂದ ಬಂದ ಹಣದಲ್ಲಿ ಅನುಕ್ರಮ ನಂ 6 ನೇ ಆಸ್ತಿಯನ್ನು 4 ನೇ ಪ್ರತಿವಾದಿಯ ಹೆಸರಿಗೆ ಖರೀದಿ ಮಾಡಿರುತ್ತಾರೆ ಅಂತಾ ನುಡಿದಿರುತ್ತಾರೆ . 8 ಲಕ್ಷ ಹಣದಲ್ಲಿ ನಮ್ಮ ಕುಟುಂಬದವರೆಲ್ಲರೂ ಸೇರಿ ಎಷ್ಟು ಹಣವನ್ನು 4 ನೇ ಪ್ರತಿವಾದಿಗೆ ಕೊಟ್ಟಿರುತ್ತೇವೆ

ಅಂತಾ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ವೆಂಕಟರೆಡ್ಡಿ ಕೊಣರೆಡ್ಡಿ ಅವರಗೆ ಹಣವನ್ನು ನಮ್ಮ ಕುಟುಂಬದವರು ಚೆಕ್ ಮೂಲಕ ಕೊಟ್ಟಿರುತ್ತಾರೋ ಅಥವಾ ನಗದಾಗಿ ಕೋಟ್ಟಿರುತ್ತಾರೋ ನನಗೆ ಗೊತ್ತಿಲ್ಲ. ಈಗ ನಾನು ನೋಡುತ್ತಿರುವ ದಾಖಲಾತಿ 4 ನೇ ಪ್ರತಿವಾದಿಯು ಅನುಕ್ರಮ ನಂ ಆಸ್ತಿಯನ್ನು ಕೊಣರೆಡ್ಡಿ ಅವರ ಕಡೆಯಿಂದ ಖರಿದಿ ಮಾಡಿದ ಬಗ್ಗೆ ಇರುವ ಖರಿದಿ ಪತ್ರದ ಡಿಜಿಟಲ್ ಪ್ರತಿ ಎಂದರೆ ಸರಿ . ಸಾಕ್ಷಿ ಸದರಿ ದಾಖಲಾತಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ 2 ಎಂದು ಗುರುತಿಸಲಾಯಿತು. ನಿಡಿ 2 ರಲ್ಲಿ 8 ಲಕ್ಷ ಹಣವನ್ನು ಭಾರತೀಯ ಸ್ಟೇಟ ಬ್ಯಾಂಕ್ , ಹುಬ್ಬಳ್ಳಿ ಬ್ರಾಂಚ್ ಮೂಲಕ ಕೊಣರೆಡ್ಡಿ ಅವರಿಗೆ ಸಂದಾಯವಾಗಿದೆ ಅಂತಾ ಬರೆದಿರುತ್ತಾರೆ ಎಂದರೆ ಸರಿ . 4 ನೇ ಪ್ರತಿವಾದಿ ಸ್ಟೇಟ ಬ್ಯಾಂಕಿನಲ್ಲಿ 7 ಲಕ್ಷ 80 ಸಾವಿರ ರೂ. ಸಾಲ ಮಾಡಿ ಉಳಿದ 20 ಸಾವಿರ ರೂ. ಹಣವನ್ನು ಕೊಣರೆಡ್ಡಿ ಅವರಿಗೆ ನಗದಾಗಿ ಒಟ್ಟು 8 ಲಕ್ಷ ರೂ.ಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಪ್ರತಿ ತಿಂಗಳು 12 ಸಾವಿರದತೆ ಸುಮಾರು ವರ್ಷಗಳ ಕಾಲ ಪಾವತಿಸಿ ಕೊನೆಗೆ 43,407 ರೂ.ಗಳನ್ನು ಒಮ್ಮೆಲೇ ಬ್ಯಾಂಕಿಗೆ ಸಂದಾಯ ಮಾಡಿ ಸಾಲವನ್ನು ತಿರುವಳಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ.

ನಮ್ಮ ಮನೆತನಕ್ಕೆ ಒಟ್ಟು 2 ಎಕರೆ 22 ಗುಂಟೆ ಜಮೀನು ಮಾತ್ರ ಇದೆ ಎಂದರೆ ಸರಿ . 2018 ಕ್ಕಿಂತ ಮೊದಲು ನಮ್ಮ ಮನೆತನದಲ್ಲಿ ನೀರಾವರಿ ಜಮೀನು ಇರಲಿಲ್ಲ ಎಂದರೆ ಸರಿಯಲ್ಲ. 2016-17 ನೇ ಇಸವಿಯಲ್ಲಿ ನಮ್ಮ ಜಮೀನು ನೀರಾವರಿ ಆಗಿರುತ್ತದೆ. ನಮ್ಮ ಜಮೀನಿನ ಪಕ್ಕ ಕಾಲುವೆ ಇರುತ್ತದೆ. ಆ ಕಾಲುವೆಗೆ ನಾವು ಯಾವುದೇ ಪಂಪಸೆಟ್ ಅಥವಾ ಪೈಪನ್ನು ಕೂಡಿಸಿಲ್ಲ ಹಾಗೆ ನೀರನ್ನು ಉಪಯೋಗಿಸುತ್ತೇವೆ. ನಿಪಿ 1 ಮತ್ತು 2 ರಲ್ಲಿ ಕಾಲುವೆ ಮೂಲಕ ನೀರು ಉಪಯೋಗಿಸುತ್ತೆವೆ ಮತ್ತು ಅದು ನೀರಾವರಿ ಜಮೀನು ಅಂತಾ ಉಲ್ಲೇಖ

ಇರುವುದಿಲ್ಲ ಎಂದರೆ ಸರಿ . ಜಮೀನಿನಲ್ಲಿ ನಾವು ಹತ್ತಿ, ಗೋವಿನ ಜೋಳ ಮತ್ತು ಕಾಯಿ ಪಲ್ಲೆಗಳನ್ನು ಬೆಳೆಯುತ್ತಿದ್ದೇವು. ಜಮೀನಿನಲ್ಲಿ ಬೆಳೆದ ಬೆಳೆಗಳನ್ನು ಎ ಪಿ ಎಂ ಸಿ ಮಾರುಕಟ್ಟೆ ರಾಣೇಬೆನ್ನೂರಿನಲ್ಲಿ ಮಾರಾಟ ಮಾಡುತ್ತಿದ್ದೇವು. ಎ ಪಿ ಎಂ ಸಿ ಮಾರುಕಟ್ಟೆ ಗೆ ಬೆಳೆಗಳನ್ನು ಮಾರಾಟ ಮಾಡಿದ ಬಗ್ಗೆ ರಸೀದಿಗಳು ಇವೆ. ರಸೀದಿಗಳನ್ನು ನಾನು ನೋಡಿರುತ್ತೇನೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಸದರಿ ರಸೀದಿಗಳು 1, 5 ಮತ್ತು 6 ನೇ ಪ್ರತಿವಾದಿಗಳ ನಡುವೆ ಇದೆ ಅಂತಾ ನುಡಿದಿರುತ್ತಾರೆ . ನಾನು ನಮ್ಮ ಮನೆತನದ 2 ಎಕರೆ 22 ಗುಂಟೆ ಜಮೀನು ನೀರಾವರಿ ಜಮೀನು ಅಲ್ಲ, ಇದರಿಂದ ಅನುಕ್ರಮ ನಂ 6 ಆಸ್ತಿಯನ್ನು ಖರಿದಿ ಹಿಡಿಯುವಷ್ಟು ಯಾವುದೇ ಉತ್ಪನ್ನ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಅನುಕ್ರಮ ನಂ 6 ನೇ ಆಸ್ತಿಯನ್ನು 4 ನೇ ಪ್ರತಿವಾದಿ ಸಾಲ ಮಾಡಿ ಖರಿದಿ ಮಾಡಿದ್ದು ನಂತರ 19 ಲಕ್ಷ 50 ಸಾವಿರ ಸಾಲ ಮಾಡಿ ಅದರಲ್ಲಿ ಮನೆ ಕಟ್ಟಿಸಿರುತ್ತಾನೆ ಎಂದರೆ ಸರಿಯಲ್ಲ. ಪ್ರತಿ ತಿಂಗಳು 20, 821 ರೂ.ಗಳನ್ನು ತನ್ನ ಸಂಬಳದಲ್ಲಿ ಪಾವತಿ ಮಾಡುತ್ತಾ 4 ನೇ ಪ್ರತಿವಾದಿ ಸಾಲವನ್ನು ಮರುಪಾವತಿ ಮಾಡುತ್ತಾ ಬಂದು ಕೊನೆಗೆ ರೂ. 15,35, 312 /- ಪ್ರತಿವಾದಿ 7 ರವರು ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅನುಕ್ರಮ ನಂ 6 ನೇ ಆಸ್ತಿ 4 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಆಗಿದ್ದು ಕಾನೂನಿನ ಪ್ರಕಾರ ಸದರಿ ಆಸ್ತಿಯನ್ನು 7 ನೇ ಪ್ರತಿವಾದಿ ಖರೀದಿ ಮಾಡಿದ್ದು, ಅಂದಿನಿಂದ 7 ನೇ ಪ್ರತಿವಾದಿ ಸದರಿ ಆಸ್ತಿಯನ್ನು ಕಬ್ಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅನುಕ್ರಮ ನಂ 6 ನೇ ಆಸ್ತಿಯಲ್ಲಿ 2018 ರಿಂದ ನಾನು ಮತ್ತು ಉಳಿದ ಪ್ರತಿವಾದಿಗಳು ಕಬ್ಜಾ ವಹಿವಾಟಿನಲ್ಲಿ ಇರುತ್ತೇವೆ. ಅನುಕ್ರಮ ಆಸ್ತಿಗೆ ಸಂಬಂಧ ಪಟಂತೆ ವಿದ್ಯೂಚಕ್ತಿ ಬಿಲ್ಲನ್ನು ಬುತ್ತು ನಗರ ಸಭೆ ತೆರಿಗೆಯನ್ನ ಆ ಮನೆಯಲ್ಲಿ ವಾಸವಾಗಿರುವರು

ಕಟ್ಟುತ್ತಾರೆ, ನಾನು ಕಟ್ಟುವುದಿಲ್ಲ. ಅನುಕ್ರಮ ನಂ 6 ಆಸ್ತಿಗೆ ಬೊರವೆಲ್ ಸೌಲಭ್ಯ ಇದೆಯೇ ಅಥವಾ ನಗರ ಸಭೆಯಿಂದ ನೀರಿನ ಸೌಕರ್ಯ ಪಡೆದಿದ್ದಾರೋ ನನಗೆ ಗೊತ್ತಿಲ್ಲ. 2018 ಮಾರ್ಚ ತಿಂಗಳಲ್ಲಿ ನಾನು ಕೊನೆಯ ಬಾರಿ ಅನುಕ್ರಮ ನಂ 6 ನೇ ಆಸ್ತಿ ಮನೆಗೆ ಹೋಗಿದ್ದೆ ನಂತರ ಹೋಗಿಲ್ಲ. ನಾನು ಅನುಕ್ರಮ ನಂ 6 ನೇ ಆಸ್ತಿಗೆ ಯಾವತ್ತು ಹೋಗಿಲ್ಲ , 7 ನೇ ಪ್ರತಿವಾದಿ ತೀರಿಕೊಂಡ ನಂತರ ಸದರಿ ಆಸ್ತಿಯಲ್ಲಿ ಪ್ರತಿವಾದಿ ನಂ 7 (ಎ) ಮತ್ತು ಅವರ ಹೆಂಡತಿ ಮಕ್ಕಳು ವಾಸವಾಗಿಲ್ಲ ಎಂದರೆ ಸರಿಯಲ್ಲ.ಅನುಕ್ರಮ ನಂ6 ನೇ ಆಸ್ತಿಗೂ ನಮಗೂ ಯಾವುದೇ ಸಂಬಂಧ ಇಲ್ಲ, ಅದಾಗ್ಯೂ ಸಹ ಸದರಿ ಆಸ್ತಿಯನ್ನು ಬುದ್ಯಾಪುರ್ವಕವಾಗಿ ದಾವೆಯಲ್ಲಿ ಸೇರಿಸಿ ಸುಳ್ಳು ಸಾಕ್ಷ್ಯನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**(ಪ್ರತಿವಾದಿ ನಂ 1,2,5,6 ನೇ ಪ್ರತಿವಾದಿಯವರನ್ನು ಮತ್ತು ಅವರ ಪರ ವಕೀಲರನ್ನು ಕರೆಸಲಾಯಿತು, ಅವರ ಗೈರು ಹಾಜರು ಮೇರೆಗೆ ಸದರಿಯವರ ಪರವಾಗಿ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. )**

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.